

# ಗಿಟಾರ್ ವೃಕ್ಷ

ಸಂಗೀತ ವಾದ್ಯಗಳು ನುಡಿಸುವುದಕ್ಕಷ್ಟೇ, ನಾದ ಆಲಿಸುವುದಕ್ಕಷ್ಟೇ ಸೀಮಿತವಲ್ಲ ಎಂಬುದನ್ನು ಕಲಾವಿದೆಯೊಬ್ಬರು ತೋರಿಸಿಕೊಟ್ಟಿದ್ದಾರೆ. ಗಿಟಾರ್, ಕೀಬೋರ್ಡ್, ವಯೊಲಿನ್‌ಗಳಂತಹ ಪ್ರಚಲಿತ ಸಂಗೀತ ವಾದ್ಯಗಳನ್ನು ಬಳಸಿ ಸಿಯಾಟೆಲ್‌ನ ಟ್ರೆಂಪಿನ್ ಎಂಬ ಕಲಾವಿದೆ ವಾದ್ಯ ವೃಕ್ಷ ಕಲಾಕೃತಿ ನಿರ್ಮಿಸಿದ್ದಾರೆ.

'ಆರು ಒಂಭತ್ತಾಗಿದ್ದರೆ..' ಶೀರ್ಷಿಕೆಯ ಈ ಕಲಾಕೃತಿ ಸಿಯಾಟೆಲ್‌ನ ಇ.ಎಂ.ಪಿ. (ಎಕ್ಸ್ಪೀರಿಯನ್ಸ್ ಮ್ಯೂಸಿಕ್ ಪ್ರಾಜೆಕ್ಟ್) ಮ್ಯೂಸಿಯಂನಲ್ಲಿದೆ. ದಿ ರೂಟ್ಸ್ ಅಂಡ್ ಬ್ರಾಂಚಸ್ ಎಂದೂ ಗುರುತಿಸಲ್ಪಡುವ ಈ ವಿಶಿಷ್ಟ ಕಲಾಕೃತಿಯ ವಿನ್ಯಾಸಕಿಯಾಗಿರುವ ಟ್ರೆಂಪಿನ್ ಕೈಚಳಕ ಇಲ್ಲಿ ಎದ್ದು ಕಾಣುತ್ತದೆ.

ವೃಕ್ಷಾಕಾರದಲ್ಲಿ ಕೆಳಗಿನಿಂದ ಮೇಲಕ್ಕೆ ಸಾಗಿದಂತೆ ವಿಶಾಲಗೊಳ್ಳುತ್ತಾ ಸಾಗುವ, ಎರಡು ಮಹಡಿಗಳಷ್ಟು ಎತ್ತರದ ಈ ರಚನೆಯ ನಿರ್ಮಾಣಕ್ಕೆ 700ಕ್ಕೂ ಹೆಚ್ಚು ಸಂಗೀತ ವಾದ್ಯಗಳನ್ನು ಬಳಸಿಕೊಳ್ಳಲಾಗಿದೆ. ಗಿಟಾರ್, ಡ್ರಮ್, ಬಾಂಜೋ, ಕೀಬೋರ್ಡ್, ಅಕಾರ್ಡಿಯನ್, ವಯೋಲಿನ್.. ಹೀಗೆ ಹಲವಾರು ವಾದ್ಯಗಳು ಮೇಳೈಸಿದ್ದರೂ, ಈ ವೃಕ್ಷದಲ್ಲಿ ಗಿಟಾರುಗಳದ್ದೇ ಕಾರುಬಾರು!

ವಿಶೇಷವಾಗಿ ವಿನ್ಯಾಸಗೊಳಿಸಲ್ಪಟ್ಟು, ಕಂಪ್ಯೂಟರ್ ನಿಯಂತ್ರಣದೊಡನೆ ಸ್ವಯಂ ಸಂಗೀತ ನುಡಿಸುವ 40 ವಾದ್ಯಗಳೂ ಈ ವೃಕ್ಷದ ಕೊಂಬೆಗಳಲ್ಲಿ ರಾರಾಜಿಸುತ್ತಿವೆ. ಜಾಸ್, ಬ್ಲೂಸ್, ರಾಕ್ ಸೇರಿದಂತೆ ಅಮೆರಿಕದ ಜನಪ್ರಿಯ ಸಂಗೀತ ಪ್ರಕಾರಗಳಲ್ಲಿ ಟ್ರೆಂಪಿನ್‌ರವರ ಕೃತಿಗಳನ್ನು ಇವು ನುಡಿಸುತ್ತವೆ. ಆಸಕ್ತರು ಈ ಕೃತಿಗಳನ್ನು ಆಲಿಸಿ ಆನಂದಿಸಲು ಅನುಕೂಲವಾಗುವಂತಹ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

★ ಮಂಜುನಾಥ. ಡಿ.ಎಸ್.

